**ಪಾಠ-6** **ನವೆಂಬರ್ 9, 2024**

# ಯೇಸುವಿನ ಬಗ್ಗೆ ಮತ್ತಷ್ಟು ಸಾಕ್ಷಿಗಳು



**ಸಬ್ಬತ್ತಿನ ಮಧ್ಯಾಹ್ನ :** ಈ ಪಾಠದ ಅಧ್ಯಯನಕ್ಕಾಗಿ ಯೋಹಾನ 1:32–36; 3:25–36; 5:36–38; ಯೋಹಾನ 6:51–71 ಹಾಗೂ 7:37–53 ಮತ್ತು ದಾನಿಯೇಲನು 7:18ನೇ ವಚನಗಳನ್ನು ಓದಿರಿ.

**ಸ್ಮರಣವಾಕ್ಯ : "ಆದರೆ ನಾನು ಭೂಮಿಯಲ್ಲಿಂದ ಮೇಲಕ್ಕೆ ಎತ್ತಲ್ಪಟ್ಟಾಗ, ಎಲ್ಲರನ್ನೂ ನನ್ನ ಬಳಿಗೆ ಎಳಕೊಳ್ಳುವೆನು ಎಂದು ಹೇಳಿದನು"** (ಯೋಹಾನ 12:32).

ಯೇಸುಸ್ವಾಮಿಯು ತಾನು ಯಾರು ಅಥವಾ ತನ್ನನ್ನು ಕಳುಹಿಸಿದವರು ಯಾರು, ತಾನು ಎಲ್ಲಿಂದ ಬಂದಿದ್ದೇನೆ. ಇಲ್ಲವೆ ತನ್ನ ಬಗ್ಗೆ ಆಶ್ಚರ್ಯಕರವಾದ ಸಂಗತಿಗಳನ್ನು ಕೇವಲ ಔಪಚಾರಿಕವಾಗಿ ಮಾತ್ರ ಹೇಳಲಿಲ್ಲ. ಆದರೆ ಅದ್ಭುತಕಾರ್ಯಗಳು ಹಾಗೂ ಸೂಚಕಕಾರ್ಯಗಳನ್ನು ಮಾಡುವುದರ ಮೂಲಕ ತಾನು ಯಾರೆಂದು ತೋರಿಸಿದನು. ಜನರಲ್ಲಿ ಅನೇಕರು ಆತನನ್ನು ನಂಬಿ– "ಕ್ರಿಸ್ತನು ಬಂದಾಗ ಈತನು ಮಾಡಿದ್ದಕ್ಕಿಂತ ಹೆಚ್ಚು ಸೂಚಕಕಾರ್ಯಗಳನ್ನು ಮಾಡಾನೋ" ಎಂದು ಬಹಿರಂಗವಾಗಿ ಸಾಕ್ಷಿ ಹೇಳಿದರು (ಯೋಹಾನ 7:31). ಕ್ರಿಸ್ತನು ತಾನು ಹೇಳಿದ ಮಾತುಗಳನ್ನು ಕ್ರಿಯೆಯ ಮೂಲಕ ತೋರಿಸಿ ತನ್ನ ವಾಕ್ಯಗಳು ಸತ್ಯವೆಂದು ಸಾಕ್ಷ್ಯಾಧಾರವಾಗಿ ತಿಳಿಸಿದನು.

ಕ್ರಿಸ್ತನ ಅದ್ಭುತಕಾರ್ಯಗಳು ಮುಂದುವರಿದಂತೆ ಜನರಲ್ಲಿ ಭಿನ್ನಾಭಿಪ್ರಾಯ ಉಂಟಾಯಿತು. ಬೆತೆಸ್ಥಾ ಕೊಳದ ಬಳಿಯಲ್ಲಿ ಆತನು ಪಾರ್ಶ್ವವಾಯು ರೋಗಿಯನ್ನು ವಾಸಿಮಾಡಿದ್ದು, ಯೆಹೂದ್ಯರ ಕೆಲವು ನಾಯಕರ ಕೋಪಕ್ಕೆ ಕಾರಣವಾಯಿತು. ಕಪೆರ್ನೌಮಿನಲ್ಲಿ ಐದುರೊಟ್ಟಿ ಎರಡು ಮೀನುಗಳಿಂದ ಯೇಸು ಐದುಸಾವಿರ

ಜನರಿಗೆ ಊಟಕ್ಕೆ ಬಡಿಸಿದನು. ಆದರೆ ಅನಂತರ ನಡೆದ ವಾದವಿವಾದಗಳ ಪರಿಣಾಮವಾಗಿ ಜನಸಮೂಹದವರು ಆತನನ್ನು ತಿರಸ್ಕರಿಸಲಿಕ್ಕೆ ಕಾರಣವಾಯಿತು. ಸತ್ತುಹೋಗಿದ್ದ ಲಾಜರನನ್ನು ಬದುಕಿಸಿದ್ದು ಕೆಲವರಲ್ಲಿ ಯೇಸುವಿನ ಬಗ್ಗೆ ನಂಬಿಕೆ ಉಂಟುಮಾಡಿತು. ಆದರೆ ಮಹಾಯಾಜಕರೂ, ಫರಿಸಾಯರೂ ಹಾಗೂ ಹಿರೀ ಸಭೆಯವರು ಆತನಿಗೆ ವಿರುದ್ಧವಾಗಿ ಒಳಸಂಚು ಮಾಡಿ ಅಂದಿನಿಂದ ಆತನನ್ನು ಕೊಲ್ಲುವುದಕ್ಕೆ ಆಲೋಚಿಸುತ್ತಿದ್ದರು.

ಈ ವಾರದ ಪಾಠದಲ್ಲಿ ಯೇಸುವಿನ ಬಗ್ಗೆ ಸಾಕ್ಷಿ ಹೇಳಿದ ಬೇರೆ ಕೆಲವರ ಬಗ್ಗೆ ತಿಳಿಯೋಣ. ಈ ಪ್ರತಿಯೊಂದು ಘಟನೆಯಲ್ಲಿಯೂ ಆತನು ನಿಜವಾಗಿಯೂ ಯಾರೆಂಬ ಕೆಲವು ಅಂಶಗಳು ಪ್ರಕಟಗೊಂಡವು. ಇವೆಲ್ಲವೂ ಒಟ್ಟಾಗಿ ಯೇಸುವೇ ಬರಬೇಕಾದ ಮೆಸ್ಸೀಯನೆಂಬ ಬಗ್ಗೆ ಜನರಲ್ಲಿ ಆಳವಾದ ಪರಿಣಾಮ ಉಂಟುಮಾಡಿತು.

**ಭಾನುವಾರ** **ನವೆಂಬರ್ 3**

## ಸ್ನಾನಿಕನಾದ ಯೋಹಾನನು ನಮ್ರತೆಯಿಂದ ತಿರುಗಿ ಸಾಕ್ಷಿ ಹೇಳಿದ್ದು

ಯೋಹಾನ ಎರಡನೇ ಅಧ್ಯಾಯದಲ್ಲಿ (36–42ನೇ ವಚನಗಳು) ಸ್ನಾನಿಕನಾದ ಯೋಹಾನನು ಕ್ರಿಸ್ತನ ಬಗ್ಗೆ ಹೇಳಿದ ಸಾಕ್ಷಿಯು ಮೊದಲ ಶಿಷ್ಯರಾದ ಅಂದ್ರೇಯ, ಯೋಹಾನ, ಫಿಲಿಪ್ಪಿ ಹಾಗೂ ನತಾನಯೇಲರನ್ನು ಆತನ ಬಳಿಗೆ ಬರ ಮಾಡಿತೆಂಬುದನ್ನು ತಿಳಿಸುತ್ತದೆ. ಈ ಸಾಕ್ಷಿಯನ್ನು ನೀಡಿದ ನಂತರವೂ ಸ್ನಾನಿಕನ ವಿಷಯವು ಯೋಹಾನನ ಸುವಾರ್ತೆಯಲ್ಲಿ ಇನ್ನೂ ಅನೇಕ ಸಾರಿ ಕಂಡುಬರುತ್ತದೆ.

ಯೋಹಾನ 3:25–36ನೇ ವಚನಗಳನ್ನು ಓದಿರಿ. ಸ್ನಾನಿಕನಾದ ಯೋಹಾನನು ತನ್ನನ್ನು ಕ್ರಿಸ್ತನೊಂದಿಗೆ ಹೇಗೆ ಹೋಲಿಕೆ ಮಾಡುತ್ತಾನೆ?

ಸ್ನಾನಿಕನಾದ ಯೋಹಾನನ ಶಿಷ್ಯರಲ್ಲಿ ಕೆಲವರಿಗೂ ಮತ್ತು ಒಬ್ಬ ಯೆಹೂದ್ಯನಿಗೂ ಶುದ್ಧಾಚಾರವನ್ನು ಕುರಿತು ವಿವಾದ ಉಂಟಾಯಿತು. ಬಹುಶಃ ದೀಕ್ಷಾಸ್ನಾನದ ಪರಿಣಾಮ ಅಥವಾ ಸಾರ್ಥಕತೆಯ ಬಗ್ಗೆ ಅವರ ನಡುವೆ ವಾದ ಉಂಟಾಗಿರಬಹುದು (ಮಾರ್ಕ 1:4,5ನೇ ವಚನಗಳನ್ನು ಓದಿರಿ). ಶಿಷ್ಯರು ಈ ಪ್ರಶ್ನೆಯನ್ನು ಪರಿಹರಿಸಿಕೊಳ್ಳಲು ಯೋಹಾನನ ಬಳಿ ಬಂದು ಯೇಸುವಿನ ವಿಷಯ ಎತ್ತಿ

"ಗುರುವೇ, ಯೋರ್ದನ್ ಹೊಳೆಯ ಆಚೆ ನಿನ್ನ ಬಳಿಯಲ್ಲಿದ್ದ ಒಬ್ಬನ ವಿಷಯವಾಗಿ ನೀನು ಸಾಕ್ಷಿ ಕೊಟ್ಟೆಯಲ್ಲಾ; ಅವನೂ ಸ್ನಾನ ಮಾಡಿಸುತ್ತಾನೆ, ಎಲ್ಲರೂ ಅವನ ಬಳಿಗೆ ಹೋಗುತ್ತಾರೆ" ಎಂದು ಹೇಳಿದರು (ಯೋಹಾನ 3:26) ಅವರ ಈ ಪ್ರಶ್ನೆಯು ಯೇಸುವಿನ ಬಗ್ಗೆ ಹೊಟ್ಟೆಕಿಚ್ಚಿನಿಂದ ಕೂಡಿತ್ತು ಅಲ್ಲದೆ ಅವರು ತಮ್ಮ ಗುರುವಾದ ಸ್ನಾನಿಕನಾದ ಯೋಹಾನನ ಬಗ್ಗೆ ಅಭಿಮಾನ ಹೊಂದಿರುವುದನ್ನು ಸೂಚಿಸುತ್ತದೆ.

ಇದನ್ನು ಕೇಳಿದ ಸ್ನಾನಿಕನಾದ ಯೋಹಾನನೂ ಸಹ ಯೇಸುವಿನ ಬಗ್ಗೆ ಸುಲಭವಾಗಿ ಅಸೂಯೆಪಡಬಹುದಿತ್ತು. ಆದರೆ ಅವನು ಆ ರೀತಿ ಮಾಡಲಿಲ್ಲ, ಯಾಕೆಂದರೆ ತಾನು ಮಾಡಬೇಕಾದ ದೈವನಿಯಮಿತ ಸೇವೆ ಏನೆಂದು ಅವನಿಗೆ ತಿಳಿದಿತ್ತು. ತನ್ನ ಶಿಷ್ಯರಿಗೆ ತಾನು ಕ್ರಿಸ್ತನಲ್ಲ, ಬದಲಾಗಿ ಕರ್ತನಾದ ಮೆಸ್ಸೀಯನಿಗೆ ದಾರಿಯನ್ನು ಸಿದ್ಧಪಡಿಸುವವನೂ ಹಾಗೂ ಆತನ ಬಗ್ಗೆ ಸಾಕ್ಷಿಕೊಡಲು ಬಂದಿದ್ದೇನೆಂದು ಅವನು ಅವರಿಗೆ ತಿಳಿಸಿದನು.

ಒಂದು ಮದುವೆಯ ದೃಷ್ಟಾಂತವನ್ನು ಉಪಯೋಗಿಸುವುದರ ಮೂಲಕ ಸ್ನಾನಿಕನಾದ ಯೋಹಾನನು ಯೇಸುಕ್ರಿಸ್ತನು ಮದಲಿಂಗನೆಂದೂ, ತಾನು ಆತನ ಗೆಳೆಯನೆಂದು ತನ್ನ ಶಿಷ್ಯರಿಗೆ ಹೇಳುತ್ತಾನೆ. ದೇವಜನರು ಮದಲಗಿತ್ತಿಯಾಗಿದ್ದಾರೆ (ಹೋಶೇಯನು 2:16–23; ಯೆಶಾಯ 62:1–5). ಅನಂತರ ಯೋಹಾನನು "ಆತನು ವೃದ್ಧಿಯಾಗಬೇಕು, ನಾನು ಕಡಿಮೆಯಾಗಬೇಕು" ಎಂದು ಹೇಳುವ ಮೂಲಕ ತನ್ನ ದೊಡ್ಡತನ ತೋರಿಸುತ್ತಾನೆ (ಯೋಹಾನ 3:30).

ಯೋಹಾನ 3:31–36ನೇ ವಚನಗಳು ಸ್ನಾನಿಕನು ಹಾಗೂ ಯೇಸುವಿನ ನಡುವಣ ಹೋಲಿಕೆಯನ್ನು ಮುಂದುವರಿಸುತ್ತಾ, ಕರ್ತನ ಹಾದಿಯನ್ನು ಸಿದ್ಧಪಡಿಸಲು ಬಂದ ಸ್ನಾನಿಕನಾದ ಯೋಹಾನನಿಗಿಂತ ಮೆಸ್ಸೀಯನಾದ ಕ್ರಿಸ್ತನು ಶ್ರೇಷ್ಠನೆಂದು ತಿಳಿಸುತ್ತವೆ. ಅವನು ಹೇಳಿದ ಸಾಕ್ಷಿಯು ಕ್ರಿಸ್ತನನ್ನು ಸೂಚಿಸುತ್ತಿದ್ದುದರಿಂದ, ಅನೇಕರು ಯೋಹಾನನ ಸಾಕ್ಷಿಯನ್ನು ನಂಬಿ, ಆತನಲ್ಲಿ ನಿತ್ಯಜೀವವುಂಟೆಂದು ನಂಬಿದರು. ಆತನನ್ನು ಅಂಗೀಕರಿಸದವರು ದೇವರ ಕೋಪಕ್ಕೆ ಒಳಗಾಗುವರು. ದೇವರು ಈ ಲೋಕವನ್ನು ಪ್ರೀತಿಸಿ, ಅದನ್ನು ಬಿಡುಗಡೆಗೊಳಿಸಬೇಕೆಂದು ತನ್ನ ಒಬ್ಬನೇ ಮಗನನ್ನು ಕಳುಹಿಸಿಕೊಟ್ಟನು (ಯೋಹಾನ 3:16,17). ಆದರೆ ಯಾರು ದೇವರ

ಉಚಿತಾರ್ಥವಾದ ಈ ವರವನ್ನು ತಿರಸ್ಕರಿಸುವರೋ, ಅವರು ತಮ್ಮ ಪಾಪಗಳಿಗಾಗಿ ನಿತ್ಯಮರಣವೆಂಬ ದಂಡನೆ ಅನುಭವಿಸುವರು.

**ದೇವರ ಮತ್ತು ಮನುಷ್ಯರ ಮುಂದೆ ನಾವು ನಮ್ರತೆಯಿಂದ ನಡೆದುಕೊಳ್ಳುವುದು ಹೇಗೆ? ನಮ್ರತೆಯ ಬಗ್ಗೆ ಸ್ನಾನಿಕನಾದ ಯೋಹಾನನ ಉದಾಹರಣೆಯಿಂದ ನಾವು ಯಾವ ಪಾಠ ಕಲಿಯಬಹುದು?**

**ಸೋಮವಾರ** **ನವೆಂಬರ್ 4**

## ಮೆಸ್ಸೀಯನ ಬಗ್ಗೆ ಒಂದು ಹೊಸದಾದ ತಿಳುವಳಿಕೆ

**ಯೋಹಾನ 1:32–36ನೇ ವಚನಗಳನ್ನೂ ಓದಿರಿ. ಮೆಸ್ಸೀಯನಿಗಾಗಿ ನಿರೀಕ್ಷೆ ಮಾಡದಿದ್ದ ಜನರಿಗೆ ಸ್ನಾನಿಕನಾದ ಯೋಹಾನನು ಯೇಸುವಿನ ಬಗ್ಗೆ ಏನು ತಿಳಿಸುತ್ತಾನೆ?**

ಮೆಸ್ಸೀಯನು ಬಂದು ತಮ್ಮನ್ನು ರೋಮನ್ನರ ಆಳ್ವಿಕೆಯಿಂದ ಸ್ವತಂತ್ರಗೊಳಿಸಿ, ಯೆಹೂದ್ಯ ರಾಜ್ಯವನ್ನು ಸ್ಥಾಪಿಸುತ್ತಾನೆಂದು ಯೆಹೂದ್ಯರು ಎದುರುನೋಡುತ್ತಿದ್ದರು. ರೋಮನ್ನರ ದಬ್ಬಾಳಿಕೆಯಿಂದ ನರಳುತ್ತಿದ್ದ ತಾವು ಮೆಸ್ಸೀಯನ ಸಹಾಯದಿಂದ ಒಂದು ಪ್ರಬಲವಾದ ದೇಶವಾಗುತ್ತೇವೆಂದು ಯೆಹೂದ್ಯರು ಅಂದುಕೊಂಡಿದ್ದರು. ಆದರೆ ಸ್ನಾನಿಕನಾದ ಯೋಹಾನನು ಯೇಸುವನ್ನು ಇಗೋ, ಯಜ್ಞಕ್ಕೆ ದೇವರು ನೇಮಿಸಿದ ಕುರಿ ಎಂದು ಆತನ ಶಿಲುಬೆಯ ತ್ಯಾಗಬಲಿದಾನದ ಬಗ್ಗೆ ತಿಳಿಸಿದನು. ಇದನ್ನು ಯೆಹೂದ್ಯರಲ್ಲಿ ಹೆಚ್ಚಿನವರು ತಪ್ಪಾಗಿ ಅರ್ಥಮಾಡಿಕೊಂಡರು. ಯೋಹಾನನು ಕ್ರಿಸ್ತನ ಬಗ್ಗೆ ಏನು ಹೇಳುತ್ತಿದ್ದಾನೆಂದು ಅವರಲ್ಲಿ ಹೆಚ್ಚಿನವರಿಗೆ ಅರಿವಾಗಲಿಲ್ಲ.

ಈ ಕಾರಣದಿಂದ ಶಿಷ್ಯನಾದ ಯೋಹಾನನು ತನ್ನ ಸುವಾರ್ತೆಯ ಮೂಲಕ ಮೆಸ್ಸೀಯನ ಬಗ್ಗೆ ಯೆಹೂದ್ಯರಿಗಿದ್ದ ಅಭಿಪ್ರಾಯವನ್ನು ಬದಲಾಯಿಸಲು ಬಯಸುತ್ತಾನೆ. ಆಗ ಅವರು ಬರಲಿರುವ ಅರಸನು ಹಾಗೂ ಅವನ ಕಾರ್ಯದ ಬಗ್ಗೆ ಪ್ರವಾದನೆಗಳು ಮುಂದಾಗಿ ನುಡಿದಿದೆಲ್ಲವೂ ಕ್ರಿಸ್ತನಲ್ಲಿ ನೆರವೇರಿದೆ ಎಂದು ಮನವರಿಕೆ ಮಾಡಿಕೊಳ್ಳುವರೆಂದು ಯೋಹಾನನ ಉದ್ದೇಶವಾಗಿತ್ತು. ಬರಬೇಕಾದ ಮೆಸ್ಸೀಯನು ರಾಜನಾಗಿಯೋ ಅಥವಾ ಸೈನ್ಯದ ದಂಡಾಧಿಕಾರಿಯಾಗಿಯೋ, ಬರುವುದಿಲ್ಲ. ಆದರೆ ಸಮಸ್ತ ಲೋಕದ ಪಾಪ ಪರಿಹಾರಕ್ಕಾಗಿ ತನ್ನನ್ನೇ ಬಲಿಯಾಗಿ ಅರ್ಪಿಸಲಿದ್ದನು. ಅದು ತಾನೇ ಆತನ ಉದ್ದೇಶವಾಗಿತ್ತು. ಇವೆಲ್ಲಾ

ಮುಕ್ತಾಯವಾದಾಗ, ಅಂತಿಮವಾಗಿ ದೇವರರಾಜ್ಯ ಬರಲಿದೆ (ದಾನಿಯೇಲನು 7:18).

ಶ್ರೀಮತಿ ವೈಟಮ್ಮನವರು 'ದಿ ಡಿಸೈರ್ ಆಫ್ ಏಜಸ್' ಪುಸ್ತಕದ 136ನೇ ಪುಟದಲ್ಲಿ ಹೀಗೆ ತಿಳಿಸುತ್ತಾರೆ :

"ಯೇಸುಸ್ವಾಮಿ ದೀಕ್ಷಾಸ್ನಾನ ತೆಗೆದುಕೊಳ್ಳುವಾಗ, ಸ್ನಾನಿಕನಾದ ಯೋಹಾನನು ಆತನನ್ನು ದೇವರು ನೇಮಿಸಿದ ಯಜ್ಞದ ಕುರಿಮರಿ ಎಂದು ಸೂಚಿಸಿದಾಗ, ಮೆಸ್ಸೀಯನ ಸೇವೆಯ ಬಗ್ಗೆ ಒಂದು ಹೊಸದಾದ ಬೆಳಕು ಪ್ರಕಾಶಿಸಿತು. ಪ್ರವಾದಿಯಾದ ಯೋಹಾನನಿಗೆ ಯೆಶಾಯ ಪ್ರವಾದಿಯು ಹೇಳಿದ "…. ವಧ್ಯಸ್ಥಾನಕ್ಕೆ ಒಯ್ಯುವ ಕುರಿಯಂತೆಯೂ…. ಬಾಯಿ ತೆರೆಯಲೇ ಇಲ್ಲ" ಎಂಬ ಮಾತು ನೆನಪಿಗೆ ಬಂದಿತು (ಯೆಶಾಯ 53:7).

ಯೋಹಾನ 1:31ನೇ ವಚನದಲ್ಲಿ ಸ್ನಾನಿಕನಾದ ಯೋಹಾನನು ಯೇಸುವಿನ ಬಗ್ಗೆ "ನನಗೂ ಆತನ ಗುರುತಿರಲಿಲ್ಲ……" ಎಂದು ಹೇಳುತ್ತಾನೆ. ಹಾಗಿದ್ದಲ್ಲಿ ಆತನೇ ಮೆಸ್ಸೀಯನೆಂದು ಯೋಹಾನನಿಗೆ ಹೇಗೆ ತಿಳಿದುಬಂದಿತು? ಸ್ನಾನಿಕನಾದ ಯೋಹಾನನನ್ನು ಕರ್ತನಿಗೆ ಹಾದಿಯನ್ನು ಸಿದ್ಧಪಡಿಸಲು ಮುಂದಾಗಿ ಕಳುಹಿಸಿದ ಕರ್ತನು ಅವನಿಗೆ– "ಯಾವನ ಮೇಲೆ ಆತ್ಮನು ಇಳಿದು ಬರುವುದನ್ನು ನೀನು ನೋಡುವಿಯೋ, ಆತನೇ ಪವಿತ್ರಾತ್ಮನ ಸ್ನಾನ ಕೊಡುವವನು ಎಂದು ತಾನೇ ನನಗೆ ಹೇಳಿದನು. ನಾನು ಅದನ್ನು ನೋಡಿ ಈತನೇ ದೇವಕುಮಾರನೆಂದು ಸಾಕ್ಷಿ ಕೊಟ್ಟಿದ್ದೇನೆ" ಎಂದು ತಿಳಿಸಿದ್ದಾನೆ (ಯೋಹಾನ 1:33,34). ಅಂದರೆ ಸ್ವತಃ ದೇವರು ತಾನೇ ಯೇಸುವೇ ಬರಬೇಕಾದ ಮೆಸ್ಸೀಯನೆಂದು ಸ್ನಾನಿಕನಾದ ಯೋಹಾನನಿಗೆ ತಿಳಿಸಿದನು.

"ಕ್ರಿಸ್ತನು ದೇವರ ಶಕ್ತಿಯೂ, ದೇವರಜ್ಞಾನವೂ ಆಗಿದ್ದಾನೆ" ಎಂದು ಪೌಲನು ಹೇಳುತ್ತಾನೆ (1 ಕೊರಿಂಥ 1:24). ಯೇಸುವು ಕ್ರಿಸ್ತನೆಂಬ ತಿಳುವಳಿಕೆಯು ಪರಿಶುದ್ಧಾತ್ಮನ ಮನವರಿಕೆಯ ಮೂಲಕ ಸ್ವತಃ ದೇವರಿಂದ ಉಂಟಾಗುತ್ತದೆ. ಈ ಸತ್ಯಾಂಶವು ಯೋಹಾನನ ಸುವಾರ್ತೆಯಲ್ಲಿ ಸಾಕಷ್ಟು ಬಾರಿ ಕಂಡುಬರುತ್ತದೆ. ಲೌಕಿಕವಾದ ವಿಜ್ಞಾನ, ತತ್ವಶಾಸ್ತ್ರ ಅಥವಾ ಉನ್ನತ ಶಿಕ್ಷಣದಿಂದ ರಕ್ಷಣೆ

ಉಂಟಾಗುವುದಿಲ್ಲ. ನಂಬಿಕೆ ಹಾಗೂ ವಿಧೇಯತೆಯಿಂದ ಕ್ರಿಸ್ತನಿಗೆ ತಮ್ಮನ್ನು ಸಂಪೂರ್ಣವಾಗಿ ಒಪ್ಪಿಸಿಕೊಡುವವರಿಗೆ ದೇವರು ತಾನೇ ಈ ರಕ್ಷಣೆಕೊಡುತ್ತಾನೆ.

**ಕ್ರಿಸ್ತನು ನಮ್ಮ ಪಾಪಪರಿಹಾರಕ್ಕಾಗಿ ತ್ಯಾಗಬಲಿಯಾಗಿದ್ದಾನೆಂಬ ಸತ್ಯವು ನಮಗೆ ಪ್ರಕಟಿಸಲ್ಪಡದಿದ್ದಲ್ಲಿ, ನಮಗೆ ಹೇಗೆ ತಿಳಿಯುತ್ತಿತ್ತು? ಆದುದರಿಂದ ಸತ್ಯವೇದವನ್ನು ಅರಿಯುವುದು ಹಾಗೂ ಅದು ಯೇಸುವಿನ ಬಗ್ಗೆ ಏನು ಬೋಧಿಸುತ್ತದೆಂಬುದನ್ನು ತಿಳಿದುಕೊಳ್ಳುವುದು ಯಾಕೆ ಬಹಳ ಪ್ರಾಮುಖ್ಯವಾಗಿದೆ?**

**ಮಂಗಳವಾರ** **ನವೆಂಬರ್ 5**

## ಅಂಗೀಕಾರ ಮತ್ತು ತಿರಸ್ಕಾರ

ಯೋಹಾನ ಆರನೇ ಅಧ್ಯಾಯದಲ್ಲಿ ಯೇಸುವು ಐದುಸಾವಿರ ಜನರಿಗೆ ಊಟಕೊಟ್ಟದ್ದರ ಬಗ್ಗೆ ತಿಳಿಸುತ್ತದೆ. ಆದರೆ ಅದರಲ್ಲಿ ಆ ಕಥೆಯ ಅಂತಿಮಭಾಗದ ಬಗ್ಗೆ ತಿಳಿಸಲಾಗಿರಲಿಲ್ಲ (ಎರಡನೇ ಪಾಠ ಓದಿರಿ). ಅದರ ಬಗ್ಗೆ ಈಗ ಕಲಿಯೋಣ.

**ಯೋಹಾನ 6:51–71ನೇ ವಚನಗಳನ್ನು ಓದಿರಿ. ಜನರು ತನ್ನನ್ನು ಅಂಗೀಕರಿಸಿಕೊಳ್ಳಲು ಹಿಂಜರಿಯುತ್ತಾರೆಂಬುದರ ಬಗ್ಗೆ ಯೇಸುಸ್ವಾಮಿ ಏನು ಹೇಳಿದ್ದಾನೆ?**

ಯೇಸುಸ್ವಾಮಿಯು ಐದುರೊಟ್ಟಿ ಎರಡು ಮೀನುಗಳಿಂದ ಐದುಸಾವಿರ ಜನರಿಗೆ ಅದ್ಭುತವಾದ ರೀತಿಯಲ್ಲಿ ಆಹಾರಕೊಟ್ಟನು. ಅದನ್ನು ನೋಡಿದ ಜನರು ಆತನನ್ನು ಅರಸನನ್ನಾಗಿ ಮಾಡಬೇಕೆಂಬ ಆಲೋಚನೆ ಮಾಡಿದ್ದರು (ಯೋಹಾನ 6:15). ಆದರೆ ಅನಂತರ ಕಪೆರ್ನೌಮಿನ ದೇವಾಲಯದಲ್ಲಿ ಆತನು ಆ ಅದ್ಭುತಕಾರ್ಯದ ಆತ್ಮೀಕ ಅರ್ಥವನ್ನು ವಿವರಿಸುತ್ತಾ "ಜೀವಕೊಡುವ ರೊಟ್ಟಿ ನಾನೇ" ಎಂದು ತಿಳಿಸಿದನು (6:35). ಅದನ್ನು ಇನ್ನು ಹೆಚ್ಚಾಗಿ ವಿವರಿಸುತ್ತಾ ಯೇಸುವು "...ನಾನು ಕೊಡುವ ರೊಟ್ಟಿ ನನ್ನ ಮಾಂಸವೇ; ಅದನ್ನು ಲೋಕದ ಜೀವಕ್ಕೋಸ್ಕರ ಕೊಡುವೆನು" ಎಂದು ಹೇಳಿದನು (6:51).

ಯೇಸುಸ್ವಾಮಿಯ ಈ ಮಾತುಗಳು ಜನಸಮೂಹದವರಲ್ಲಿ ಈತನು ಈ ಲೋಕದಲ್ಲಿ ತಮ್ಮ ಅರಸನಾಗುವುದಿಲ್ಲವೆಂಬ ಅರಿವನ್ನು ಹುಟ್ಟಿಸಿತು. ಮನುಷ್ಯರ ಲೌಕಿಕ ಆಲೋಚನೆಗೆ ಆತನು ಹೊಂದಿಕೊಳ್ಳಲಾಗದು. ಆತನು ಲೋಕಕ್ಕೆ ಬರಬೇಕಾದ ಮೆಸ್ಸೀಯನೆಂದು ಜನರು ಅಂಗೀಕರಿಸಿಕೊಳ್ಳುವಂತೆ ಅವರಲ್ಲಿ ಒಂದು ಮಹಾ–

ಬದಲಾವಣೆ ತರುವುದನ್ನು ಅವರು ನಿರಾಕರಿಸಿದರು. ಅಂದಿನಿಂದ ಆತನ ಶಿಷ್ಯರಲ್ಲಿ ಅನೇಕರು ಹಿಂಜರಿದು ಆತನ ಕೂಡ ಸಂಚಾರ ಮಾಡುವುದನ್ನು ಬಿಟ್ಟರು (6:66).

ಮಾನವ ಸಹಜ ದೃಷ್ಟಿಯಲ್ಲಿ ಯೇಸುಸ್ವಾಮಿಗೆ ಇದು ಕಠಿಣವಾಗಿ ಕಂಡಿರಬಹುದು. ನಮ್ಮನ್ನು ಜನರು ಇಷ್ಟಪಟ್ಟಾಗ ಅದನ್ನು ಬೇಡವೆಂದು ನಾವು ಹೇಳುತ್ತೇವೆಯೇ? ಆದರೆ ಅನೇಕ ಜನರು ಕ್ರಿಸ್ತನನ್ನು ಹಿಂಬಾಲಿಸಲು ಹಿಂಜರಿದು, ಆತನ ಬೋಧನೆಗಳನ್ನು ಪ್ರಶ್ನಿಸಿದಾಗ ಆತನಿಗೆ ನಿರಾಶೆಯಾಗುವುದು ಸಹಜ. ಆಗ ಯೇಸುವು ತನ್ನ ಹನ್ನೆರಡು ಮಂದಿ ಶಿಷ್ಯರನ್ನು– 'ನೀವೂ ಸಹ ನನ್ನನ್ನು ಬಿಟ್ಟು ಹೋಗಬೇಕೆಂದಿದ್ದೀರಾ?' ಎಂದು ಕೇಳಿದನು.

ಆ ಸಮಯದಲ್ಲಿ ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬನಾದ ಪೇತ್ರನು ಯೇಸುವು ಯಾರು ಹಾಗೂ ಆತನಲ್ಲಿ ಏನಿದೆ ಎಂಬ ಬಗ್ಗೆ ಒಂದು ವಿಸ್ಮಯಕರವಾದ ಸಾಕ್ಷಿ ಹೇಳಿದನು. ಸೀಮೋನ್ ಪೇತ್ರನು ಅದಕ್ಕುತ್ತರವಾಗಿ– "ಸ್ವಾಮಿ, ನಿನ್ನನ್ನು ಬಿಟ್ಟು ನಾವು ಇನ್ನಾರ ಬಳಿಗೆ ಹೋಗೋಣ? ನಿನ್ನಲ್ಲಿ ನಿತ್ಯಜೀವವನ್ನು ಉಂಟುಮಾಡುವ ವಾಕ್ಯಗಳುಂಟು; ನೀನು ದೇವರು ಪ್ರತಿಷ್ಠಿಸಿದವನೇ...." ಎಂದು ಹೇಳಿದನು (ಯೋಹಾನ 6:68,69).

ಹನ್ನೆರಡು ಮಂದಿ ಶಿಷ್ಯರು ಯೇಸುವಿನೊಂದಿಗೆ ಕೆಲವು ವರ್ಷಗಳ ಕಾಲ ಜೊತೆಗಿದ್ದು ಆತನೊಂದಿಗೆ ಪ್ರಯಾಣ ಮಾಡಿದ್ದಾರೆ. ಆತನು ಮಾಡಿದ ಅದ್ಭುತ ಕಾರ್ಯಗಳು, ಸೂಚಕಕಾರ್ಯಗಳನ್ನು ನೋಡಿದ್ದಾರೆ ಹಾಗೂ ಬೋಧನೆಗಳನ್ನು ಕೇಳಿದ್ದಾರೆ. ಆತನಿಗೆ ಸಮಾನನಾದವನು ಯಾರೂ ಇಲ್ಲವೆಂದು ಶಿಷ್ಯರಿಗೆ ಅನುಭವದಿಂದ ತಿಳಿದಿತ್ತು. ಸಮಯ ಸಂದರ್ಭಗಳು ಎಷ್ಟೇ ಅಸಾಧಾರಣವಾಗಿದ್ದರೂ ಮತ್ತು ಆತನು ಈ ಲೋಕಕ್ಕೆ ಬಂದ ಉದ್ದೇಶವು ಅವರಿಗೆ ಸಂಪೂರ್ಣವಾಗಿ ತಿಳಿಯದಿದ್ದರೂ, ಕ್ರಿಸ್ತನೇ ಮೆಸ್ಸೀಯನೆಂದು ಶಿಷ್ಯರಿಗೆ ಮನವರಿಕೆಯಾಗಿತ್ತು. ಆತನ ಮರಣ ಹಾಗೂ ಪುನರುತ್ಥಾನದ ನಂತರವೇ ಆತನು ಯಾಕೆ ಈ ಲೋಕಕ್ಕೆ ಬಂದನೆಂಬುದನ್ನು ಅವರು ಅರ್ಥಮಾಡಿಕೊಳ್ಳಲು ಆರಂಭಿಸಿದರು.

**ಜನರು ಹೆಚ್ಚಿನ ಸಂಖ್ಯೆಯಲ್ಲಿ ಒಂದೇಕಡೆ ಇದ್ದರೂ, ಸಾಮಾನ್ಯವಾಗಿ ಅಭಿಪ್ರಾಯವು ತಪ್ಪಾಗಿರುತ್ತದೆಂಬ ಅಂಶದ ಬಗ್ಗೆ ಈ ಸಂಗತಿಯಿಂದ ನಾವೇನು ತಿಳಿದುಕೊಳ್ಳಬಹುದು?**

**ಕ್ರೈಸ್ತರಲ್ಲಿ ಹೆಚ್ಚಿನವರಿಗೆ ಅಡ್ವೆಂಟಿಸ್ಟರಾದ ನಮ್ಮ ನಂಬಿಕೆಯ ಕೆಲವು ಅಂಶಗಳು ಜನಪ್ರಿಯುವಾಗಿಲ್ಲದಿರುವಾಗ, ನಾವು ಯಾಕೆ ಮೇಲಿನ ವಿಷಯುವನ್ನು ಜ್ಞಾಪಕದಲ್ಲಿಡಬೇಕು?**

**ಬುಧವಾರ** **ನವೆಂಬರ್ 6**

## ತಂದೆಯ ಸಾಕ್ಷಿ

ಯೋಹಾನನ ಸುವಾರ್ತೆಯು ವಾಕ್ಯದ ಬಗ್ಗೆ ತಿಳಿಸುತ್ತಾ (Logos), ಆ ವಾಕ್ಯವು ದೇವರ ಬಳಿಯಲ್ಲಿತ್ತು. ಅಂದರೆ ತಂದೆಯಾದ ದೇವರ ಬಳಿಯಲ್ಲಿತ್ತು ಎಂದು ಆರಂಭವಾಗುತ್ತದೆ (ಯೋಹಾನ 1:1). ಈ ವಾಕ್ಯವು ನರಾವತಾರವೆತ್ತಿ ಬಂದಾಗ, ಪರಿಶುದ್ಧಾತ್ಮನು ಆತನ ದೀಕ್ಷಾಸ್ನಾನದ ಸಮಯದಲ್ಲಿ ಪಾರಿವಾಳದ ರೂಪದಲ್ಲಿ ಇಳಿದು ಬಂದು ಆತನ ಮೇಲೆ ನೆಲೆಗೊಂಡನು. ಆದರೆ ತಂದೆಯೂ ಸಹ ಯೇಸುಸ್ವಾಮಿಯು ಈ ಲೋಕದಲ್ಲಿ ತನ್ನ ಸೇವೆ ಮಾಡುತ್ತಿರುವಾಗ, ಆತನ ಬಗ್ಗೆ ಸಾಕ್ಷಿ ಹೇಳಿದನು.

**ಯೋಹಾನ 5:36–38ನೇ ವಚನಗಳನ್ನು ಓದಿರಿ. ಯೇಸುವು ತಂದೆಯಾದ ದೇವರ ಬಗ್ಗೆ ಏನು ಹೇಳುತ್ತಾನೆ?**

ಯೇಸುಸ್ವಾಮಿಯ ತಾನು ಮಾಡಿದ ಕೆಲಸಗಳು ಹಾಗೂ ಅದ್ಭುತಗಳೆಲ್ಲವೂ ತಂದೆಯ ಸಹಾಯದಿಂದ ಮಾಡಿದವೆಂದು ಹೇಳುತ್ತಾನೆ. ಅಲ್ಲದೆ ತಾನು ಮಾಡುವ ಕೆಲಸಗಳು ತಂದೆಯು ನನ್ನನ್ನು ಕಳುಹಿಸಿಕೊಟ್ಟನೆಂಬುದಾಗಿ ನನ್ನ ವಿಷಯದಲ್ಲಿ ಸಾಕ್ಷಿ ಕೊಡುತ್ತವೆ ಎಂದು ತಿಳಿಸುತ್ತಾನೆ.

**ಮತ್ತಾಯ 3:17; 17:5; ಮಾರ್ಕ 1:11 ಹಾಗೂ ಲೂಕ 3:22ನೇ ವಚನಗಳಲ್ಲಿ ತಂದೆಯು ಯೇಸುವಿನ ಬಗ್ಗೆ ಏನು ಹೇಳುತ್ತಾನೆಂದು ತಿಳಿಸುತ್ತವೆ? 2 ಪೇತ್ರನು 1:17,18ನೇ ವಚನಗಳನ್ನೂ ಸಹ ಓದಿರಿ.**

ಯೇಸುವು ದೀಕ್ಷಾಸ್ನಾನ ತೆಗೆದುಕೊಂಡಾಗ ತಂದೆಯು ಈತನು ಪ್ರಿಯನಾದ ನನ್ನ ಮಗನು ಎಂದು ಹೇಳಿದನು. ಪರಿಶುದ್ಧಾತ್ಮನು ಪಾರಿವಾಳದ ರೂಪದಲ್ಲಿ ಬಂದು ಆತನ ಮೇಲೆ ನೆಲೆಗೊಂಡನು. ಇದು ಯೇಸುವಿನ ಸುವಾರ್ತಾ ಸೇವೆಯು ಆರಂಭವಾಗುವ ಪ್ರಮುಖ ಸಂದರ್ಭದ ಆರಂಭವಾಗಿತ್ತು. ಇದೂ ಅಲ್ಲದೆ

ಯೇಸುಸ್ವಾಮಿಯ ಸೇವೆಯ ನಿರ್ಣಾಯಕ ಸಮಯದಲ್ಲಿ ತಂದೆಯು ಮತ್ತೊಂದಾವರ್ತಿ ಮಗನ ಬಗ್ಗೆ– "ನಿನ್ನನ್ನು ಮಹಿಮೆಪಡಿಸಿದ್ದೇನೆ; ತಿರುಗಿ ಮಹಿಮೆ ಪಡಿಸುವೆನು" ಎಂದು ಸಾಕ್ಷಿ ಹೇಳಿದನು (ಯೋಹಾನ 12:28).

ಯೇಸುಸ್ವಾಮಿಯ ಸೇವೆಯ ಕೊನೆಯ ಕಾಲದಲ್ಲಿ ಆತನ ಬಗೆಗಿನ ಸಂಗತಿಯು ನಿರ್ಣಾಯಕ ಘಟ್ಟ ತಲುಪಿತು. ಯೆಹೂದ್ಯನಾಯಕರು ಕ್ರಿಸ್ತನು ಮಾಡುವ ಅದ್ಭುತ ಕಾರ್ಯಗಳನ್ನು ತಡೆಯಲು ಸಾಧ್ಯವಾಗದೆ, ಆತನನ್ನು ಕೊಲ್ಲಬೇಕೆಂದು ಪಿತೂರಿ ಮಾಡಿದರು (ಯೋಹಾನ 12:19). ಲಾಜರನನ್ನು ಎಬ್ಬಿಸಿದ್ದನ್ನು ನೋಡಿದವರು ಹಾಗೂ ಅದರ ಬಗ್ಗೆ ಇತರರಿಂದ ಸಾಕ್ಷಿ ಕೇಳಿದವರು ಆತನನ್ನು ಹಿಂಬಾಲಿಸಲು ತೊಡಗಿದರು (12:17,18). ದೇವಾರಾಧನೆ ಮಾಡಬೇಕೆಂದು ಪಸ್ಕಹಬ್ಬದ ಜಾತ್ರೆಗೆ ಬಂದ ಗ್ರೀಕರೂ ಸಹ ಯೇಸುವನ್ನು ನೋದಬೇಕೆಂದು ಅಪೇಕ್ಷಿಸಿದರು.

ಆ ಸಮಯದಲ್ಲಿ ಯೇಸುಸ್ವಾಮಿಯು– "ತಂದೆಯೇ, ನಿನ್ನ ಹೆಸರನ್ನು ಮಹಿಮೆ ಪಡಿಸಿಕೋ" ಅಂದನು. ಅದಕ್ಕುತ್ತರವಾಗಿ ತಂದೆಯು ಪರಲೋಕದಿಂದ– "ಮಹಿಮೆ ಪಡಿಸಿದ್ದೆನೆ, ತಿರುಗಿ ಮಹಿಮೆಪಡಿಸುವೆನು" ಎಂದು ಹೇಳಿದನು (ಯೋಹಾನ 12:28).

ನಾವು ಈಗಾಗಲೇ ನೋಡಿದಂತೆ ಶಿಲುಬೆಯ ಮರಣವು ಯೇಸುವು ಮಹಿಮೆ ಪಡುವ ಸಮಯವಾಗಿತ್ತು. ಈ ಕಾರಣದಿಂದ ತಂದೆಯಾದ ದೇವರು ಮಗನ ಬಗ್ಗೆ ಕೊಟ್ಟ ಸಾಕ್ಷಿಯು ಸಮಸ್ತ ಲೋಕದ ಪಾಪಗಳ ನಿವಾರಣೆಗಾಗಿ ದೇವರ ಯಜ್ಞದ ಕುರಿಯಾದ ಕ್ರಿಸ್ತನ ಮಹಾಬಲಿದಾನವನ್ನು ಸೂಚಿಸುತ್ತಿತ್ತು. ನಮ್ಮ ಪರವಾಗಿ ಆತನ ಶಿಲುಬೆಯ ಮರಣವು ನಮ್ಮ ಪಾಪಗಳಿಗೆ ಪೂರ್ಣ ಪರಿಹಾರ ನೀಡಿತು. ಆತನಲ್ಲಿ ನಂಬಿಕೆಯಿಡುವ ನಾವು ಇನ್ನೆಂದಿಗೂ, ನಮ್ಮ ಪಾಪಿಗಳಿಗಾಗಿ ದಂಡನೆ ಅನುಭವಿಸಬೇಕಾಗಿಲ್ಲ.

**ಗುರುವಾರ** **ನವೆಂಬರ್ 7**

## ಜನಸಮೂಹದ ಸಾಕ್ಷಿ

"ಆ ಜಾತ್ರೆಯ ಮಹಾದಿವಸವಾದ ಕಡೇ ದಿನದಲ್ಲಿ ಯೇಸು ನಿಂತುಕೊಂಡು– ಯಾವನಿಗಾದರೂ ನೀರಡಿಕೆಯಾಗಿದ್ದರೆ, ಅವನು ನನ್ನ ಬಳಿಗೆ ಬಂದು ಕುಡಿಯಲಿ ನನ್ನನ್ನು ನಂಬಿದವನ ಹೊಟ್ಟೆಯೊಳಗಿಂದ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ

ಜೀವಕರವಾದ ನೀರಿನ ಹೊಳೆಗಳು ಹರಿಯುವವು ಎಂದು ಕೂಗಿ ಹೇಳಿದನು" (ಯೋಹಾನ 7:37,38).

ಯೇಸುವು ತನ್ನ ಬಗ್ಗೆ, ತಾನು ಯಾರು ಹಾಗೂ ತಾನು ಈ ಲೋಕಕ್ಕೆ ಬಂದ ಕಾರಣದ ಬಗ್ಗೆ ಅನೇಕ ಸಾರಿ ಬಹಳ ಧೈರ್ಯವಾದ ಹೇಳಿಕೆ ನೀಡಿದ್ದಾನೆ. ಇದನ್ನು ಯೋಹಾನನು ತನ್ನ ಸುವಾರ್ತೆಯಲ್ಲಿ ದಾಖಲಿಸಿದ್ದಾನೆ. ಮೇಲೆ ತಿಳಿಸಿದ ವಾಕ್ಯಗಳು ತನ್ನನ್ನು ನಂಬಿದವರು ಹೊಂದಲಿರುವ ಪವಿತ್ರಾತ್ಮನ ವರ ಹಾಗೂ ತನ್ನ ಬಳಿಗೆ ಬರುವವರಿಗೆ ಏನು ಮಾಡುತ್ತೇನೆಂದು ಯೇಸುವು ಹೇಳಿದ್ದನ್ನು ತಿಳಿಸುತ್ತವೆ. ಇವು ಆಶ್ಚರ್ಯಕರವಾದ ಹೇಳಿಕೆಗಳಾಗಿವೆ.

**ಪರ್ಣಶಾಲೆಗಳ ಹಬ್ಬದ ಜಾತ್ರೆಯಲ್ಲಿ ಭಾಗವಹಿಸಿದ್ದ ಯೆಹೂದ್ಯರಿಗೆ ಯೇಸುವು ಯಾರಿಗಾದರೂ ನೀರಡಿಕೆಯಾಗಿದ್ದರೆ ನನ್ನ ಬಳಿಗೆ ಬಂದು ಕುಡಿಯಲಿ ಎಂದು ಆಹ್ವಾನ ನೀಡಿದನು. ಇದಕ್ಕೆ ಜನಸಮೂಹದವರ ಪ್ರತಿಕ್ರಿಯೆ ಏನಾಗಿತ್ತು? (ಯೋಹಾನ 7:37–53).**

ಜನರಲ್ಲಿ ಕೆಲವರು ಯೇಸುವಿನ ಈ ಮಾತುಗಳನ್ನು ಕೇಳಿ ಮೋಶೆಯು ಸಾವಿರದ ನಾಲ್ಕು ನೂರು ವರ್ಷಗಳ ಹಿಂದೆ ತಿಳಿಸಿದ ಪ್ರವಾದಿಯು ಈತನೇ ಇರಬಹುದೆಂದರು. ಬೇರೆ ಕೆಲವರು– ಈತನು ಬರಬೇಕಾದ ಕ್ರಿಸ್ತನು ಅಂದರು. ಆದರೆ ಇನ್ನೂ ಇತರರು ಗಲಿಲಾಯದಿಂದ ಮೆಸ್ಸೀಯನು ಬರುವುದಾದರೂ ಹೇಗೆ? ಎಂದು ವಾದ ಮಾಡಿದರು. ಅಲ್ಲದೆ ದಾವೀದನ ಸಂತಾನದಿಂದಲೂ, ಬೆತ್ಲೆ ಹೇಮಿನಿಂದಲೂ ಕ್ರಿಸ್ತನು ಬರುವನು ಎಂದು ಶಾಸ್ತ್ರದಲ್ಲಿ ಬರೆದಿದೆಯಲ್ಲಾ ಅಂದರು. ಜನ ಸಮೂಹದವರಿಗೆ ಆತನು ಯಾರೆಂದು ಸ್ಪಷ್ಟವಾಗಿ ತಿಳಿಯದೇ ಇದ್ದರೂ, ಕ್ರಿಸ್ತನ ಬಗ್ಗೆ ಅವರೆಲ್ಲರೂ ತಿಳಿಸಿದ್ದೆಲ್ಲವೂ ಸತ್ಯವೇ ಆಗಿತ್ತು (ಮತ್ತಾಯ ಮೊದಲನೆ ಹಾಗೂ ಎರಡನೇ ಅಧ್ಯಾಯ ಓದಿರಿ).

ಯೇಸುವನ್ನು ಹಿಡಿದು ತರಲು ಮಹಾಯಾಜಕರು ಮತ್ತು ಫರಿಸಾಯರಿಂದ ಕಳುಹಿಸಲ್ಪಟ್ಟ ಓಲೇಕಾರರೂ ಸಹ– ಈ ಮನುಷ್ಯನು ಮಾತಾಡುವ ರೀತಿಯಲ್ಲಿ ಯಾರೂ ಎಂದೂ ಮಾತಾಡಿದ್ದಿಲ್ಲ ಎಂದು ಉತ್ತರ ಕೊಟ್ಟರು. ಆಗ ಫರಿಸಾಯರು ಓಲೆಕಾರರಿಗೆ– "ಹಿರೀ ಸಭೆಯುವರಲ್ಲಿಯಾಗಲಿ, ಫರಿಸಾಯರಲ್ಲಿಯಾಗಲಿ,

ಯಾರಾದರೂ ಆತನನ್ನು ನಂಬಿದ್ದಾರೋ? ಎಂದು ಮತ್ತೊಂದು ಪ್ರಶ್ನೆ ಕೇಳಿದರು. ಯೇಸುಸ್ವಾಮಿಯನ್ನು ರಾತ್ರಿಯಲ್ಲಿ ಭೇಟಿ ಮಾಡಿದ್ದ ಹಿರೀಸಭೆಯ ನಿಕೊದೇಮನು ಫರಿಸಾಯರು ಮತ್ತು ಮಹಾಯಾಜಕರ ಕುತಂತ್ರದಿಂದ ಆತನನ್ನು ಪಾರು ಮಾಡಬೇಕೆಂಬ ಉದ್ದೇಶದಿಂದ "ನಮ್ಮ ಧರ್ಮಶಾಸ್ತ್ರವು ಮೊದಲು ಒಬ್ಬನನ್ನು ವಿಚಾರಿಸಿ ಅವನು ಮಾಡುವುದೇನೆಂದು ತಿಳುಕೊಳ್ಳದೆ ಅವನ ವಿಷಯವಾಗಿ ತೀರ್ಪು ಮಾಡುವುದುಂಟೇ?" ಎಂದು ಕೇಳಿದನು (ಯೋಹಾನ 7:51).

ನಿಕೊದೇಮನು ಯೇಸುವನ್ನು ಮೆಸ್ಸೀಯನೆಂದು ಎಂದಾದರೂ ಅಂಗೀಕರಿಸಿದ್ದನೇ? ಈ ಸಮಯದಲ್ಲಿ ನಮಗೆ ಸ್ಪಷ್ಟವಾಗಿ ತಿಳಿದಿಲ್ಲ. ಆದರೆ ಯೇಸು ಮರಣ ಹೊಂದಿದನಂತರ ಅವನು ರಕ್ತ ಬೋಳ ಅಗರುಗಳ ಸುಗಂಧದ್ರವ್ಯವನ್ನು ತಂದನೆಂದು ನೋಡಿದಾಗ (ಯೋಹಾನ 19:39). ಅನಂತರ ನಿಕೊದೇಮನು ಯೇಸುವನ್ನು ಮೆಸ್ಸೀಯನೆಂದು ಅಂಗೀಕರಿಸಿಕೊಂಡಿದ್ದನೆಂದು ತಿಳಿದುಬರುತ್ತದೆ.

**ಯೋಹಾನ 7:49ನೇ ವಚನ ಓದಿರಿ. ಹಿರೀಸಭೆಯವರು ಮತ್ತು ಮಹಾಯಾಜಕರು ಆಡಿದ ಈ ಮಾತುಗಳು ಅವರು ಯೇಸುವನ್ನು ಹಿಂಬಾಲಿಸಿದ ಸಾಧಾರಣ ಜನರ ಬಗ್ಗೆ ತಿರಸ್ಕಾರ ಹೊಂದಿದ್ದಾರೆಂಬುದನ್ನು ಹೇಗೆ ತಿಳಿಸುತ್ತದೆ? ಇದರಿಂದ ನಾವು ಕಲಿಯಬೇಕಾದ ಪಾಠವೇನು?**

**ಶುಕ್ರವಾರ** **ನವೆಂಬರ್ 8**

**ಹೆಚ್ಚಿನ ಚಿಂತನೆ :** ಶ್ರೀಮತಿ ವೈಟಮ್ಮನವರ 'ದಿ ಡಿಸೈರ್ ಆಫ್ ಏಜಸ್' ಪುಸ್ತಕದ 'ದಿ ಕ್ರೈಸಿಸ್ ಇನ್ ಗ್ಯಾಲಿಲಿ' ಹಾಗೂ 'ಇನ್ ದಿ ಔಟರ್ ಕೋರ್ಟ್' ಎಂಬ ಅಧ್ಯಾಯಗಳನ್ನು ಓದಿರಿ.

ಶ್ರೀಮತಿ ವೈಟಮ್ಮನವರು 'ದಿ ಕ್ರೈಸಿಸ್ ಇನ್ ಗ್ಯಾಲಿಲಿ' ಎಂಬ ಅಧ್ಯಾಯದಲ್ಲಿ ಹೀಗೆ ತಿಳಿಸುತ್ತಾರೆ :

"ಸೀಮೋನ್ ಪೇತ್ರನು ಯೇಸುವಿಗೆ– ಸ್ವಾಮಿ ನಿನ್ನನ್ನು ಬಿಟ್ಟು ನಾವು ಇನ್ನಾರ ಬಳಿಗೆ ಹೋಗೋಣ?" ಎಂದು ಕೇಳಿದನು. ಯೆಹೂದ್ಯರ ಧಾರ್ಮಿಕ ನಾಯಕರು ಅತಿಯಾದ ನೇಮನಿಷ್ಠೆ ಹಾಗೂ ಸಂಪ್ರದಾಯಗಳ ದಾಸರಾಗಿದ್ದರು. ಫರಿಸಾಯರು ಮತ್ತು ಸದ್ದುಕಾಯರು ಯಾವಾಗಲೂ ತಮ್ಮ ನಂಬಿಕೆಗಳ ಬಗ್ಗೆ ತೀಕ್ಷ್ಣವಾಗಿ

ವಾದವಿವಾದ ಮಾಡುತ್ತಿದ್ದರು. ಯೇಸುವನ್ನು ನಿರಾಕರಿಸುವುದೆಂದರೆ ಸಾಂಪ್ರದಾಯಿಕ ನೀತಿ ನಿಯಮಗಳ ಬಗ್ಗೆ ಅತಿಯಾದ ನಿಷ್ಠೆ ತೋರಿಸುವುದಾಗಿತ್ತು. ಸ್ವಾರ್ಥಿಗಳಾದ ಫರಿಸಾಯರು ಮತ್ತು ಸದ್ದುಕಾಯರು ತಮ್ಮದೇ ಆದ ಪ್ರತಿಷ್ಠೆಗಾಗಿ ಹಾತೊರೆಯುತ್ತಿದ್ದರು. ಆದರೆ ಶಿಷ್ಯರು ಕ್ರಿಸ್ತನನ್ನು ಮೆಸ್ಸೀಯನೆಂದು ಅಂಗೀಕರಿಸಿಕೊಂಡ ನಂತರ ಅವರ ಜೀವನದಲ್ಲಿ ಹಿಂದೆಂದೂ ಕಾಣದಂತ ಸಂತೋಷ, ಸಮಾಧಾನ ಉಂಟಾಗಿತ್ತು. ಆದುದರಿಂದ ಅವರು ಯೇಸುವು ಪಾಪಿಗಳ ಸ್ನೇಹಿತನೆಂದು ಅಪಹಾಸ್ಯ ಮಾಡಿ ತಮ್ಮನ್ನು ಹಿಂಸಿಸಿದ ಯೆಹೂದ್ಯ ಧಾರ್ಮಿಕ ನಾಯಕರ ಬಳಿಗೆ ಹಿಂದಿರುಗುವುದಾದರೂ ಹೇಗೆ? ಶಿಷ್ಯರು ಬಹಳ ಕಾಲದಿಂದ ಎದುರು ನೋಡುತ್ತಿದ್ದ ಮೆಸ್ಸೀಯನು ಈಗ ಬಂದಿದ್ದಾನೆ. ಅಂತವನನ್ನು ಬಿಟ್ಟು ಆತನನ್ನು ಹಿಂಸಿಸುತ್ತಿರುವ ಹಾಗೂ ಕೊಲ್ಲಲು ಪ್ರಯತ್ನಿಸುತ್ತಿರುವವರ ಬಳಿ ಹೇಗೆ ಹಿಂದಿರುಗುವುದು?

"ಸ್ವಾಮಿ, ನಿನ್ನನ್ನು ಬಿಟ್ಟು ನಾವು ಇನ್ನಾರ ಬಳಿಗೆ ಹೋಗೋಣ, ನೀನು ದೇವರು ಪ್ರತಿಷ್ಠಿಸಿದವನು ಹಾಗೂ ಬರಬೇಕಾದ ಕ್ರಿಸ್ತನು ಎಂದು ಪೇತ್ರನು ಹೇಳುತ್ತಾನೆ. ತಮ್ಮ ಜೀವನದ ಆಶ್ರಯದುರ್ಗವಾಗಿರುವ ಈತನನ್ನು ಕಳೆದುಕೊಳ್ಳುವ ಆಲೋಚನೆಯು ಶಿಷ್ಯರಲ್ಲಿ ಭಯ ಹಾಗೂ ವೇದನೆ ಉಂಟುಮಾಡಿತು. ದೋಣಿಯು ಬಿರುಗಾಳಿ ಎದ್ದ ಸಮುದ್ರದಲ್ಲಿ ಕತ್ತಲೆಯಲ್ಲಿ ದೂರವಾದಂತೆ, ರಕ್ಷಕನಿಲ್ಲದ ಶಿಷ್ಯರ ಜೀವನವೂ ಸಹ ಚುಕ್ಕಾಣಿಯಿಲ್ಲದ ಹಡಗಿನಂತಾಗುತ್ತಿತ್ತು".

## ಚರ್ಚಿಸಬೇಕಾದ ಪ್ರಶ್ನೆಗಳು

1. ಯೇಸುಕ್ರಿಸ್ತನು ಮೆಸ್ಸೀಯನೆಂಬ ಸತ್ಯವನ್ನು ಕೆಲವರು ಯಾಕೆ ಸಂತೋಷದಿಂದ ಅಂಗೀಕರಿಸಿದರು? ಅದೇ ಸಾಕ್ಷ್ಯಾಧಾರ ನೀಡಿದರೂ, ಬೇರೆ ಕೆಲವರು ಯಾಕೆ ತಿರಸ್ಕರಿಸಿದರು?

2. ಯೇಸುಕ್ರಿಸ್ತನು ನಮ್ಮ ಪಾಪಿಗಳಿಗಾಗಿ ಮರಣ ಹೊಂದಿದನೆಂಬ ಪ್ರಾಮುಖ್ಯವಾದ ಸತ್ಯಕ್ಕಿಂತ ಬೇರೆನಿದೆ? ಆದಾಗ್ಯೂ, ನಾವು ಇಂತಹ ಸತ್ಯವನ್ನು ಹೇಗೆ ತಿಳಿದುಕೊಂಡೆವು? ವಿಜ್ಞಾನ, ನೈಸರ್ಗಿಕ ನಿಯಮ, ತರ್ಕಶಾಸ್ತ್ರ, ಧಾರ್ಮಿಕ ತತ್ವಶಾಸ್ತ್ರ (ಥಿಯಾಲಜಿ) ಅಥವಾ ವಿವೇಚನಾ ಶೀಲತೆಯಿಂದಲೇ (Reason). ಇವು ಸೃಷ್ಟಿಕರ್ತನಾದ ದೇವರನ್ನು

ನಂಬುವಂತೆ ಮಾಡುತ್ತವೆ. ಆದರೆ ಇವು ಯಾವುವೂ ಸಹ ನಾವು ತಿಳಿಯಬೇಕಾದ ಕ್ರಿಸ್ತನು ನಮ್ಮ ಪಾಪಿಗಳಿಗಾಗಿ ತಾನು ಸತ್ತನೆಂಬ ಪ್ರಮುಖವಾದ ಸತ್ಯವನ್ನು ತಿಳಿಸುವುದಿಲ್ಲ. ಆದುದರಿಂದ ನಾವು ಯಾಕೆ ನಂಬಿಕೆಯ ವಿಷಯದಲ್ಲಿ ಸತ್ಯವೇದದ ಮೇಲೆ ಯಾಕೆ ವಿಶ್ವಾಸವಿಡಬೇಕು?

೩. ದೇವರು ನಿಮ್ಮ ಜೀವನದಲ್ಲಿ ಮಾಡಿದ ಒಳ್ಳೇ ಕಾರ್ಯಗಳ ಬಗ್ಗೆ ಮತ್ತೊಮ್ಮೆ ವಿವರಿಸುವುದು ನಮ್ಮ ನಂಬಿಕೆಯ ಆತ್ಮೀಕ ಬೆಳವಣಿಗೆಗೆ ಯಾಕೆ ಪ್ರಾಮುಖ್ಯವಾಗಿದೆ?